ಗದಗ ನೀರು ಸರಬರಾಜು ಯೋಜನೆ ತುಂಗಭದ್ರಾ ನದಿಯಿಂದ ಕಾರ್ಯದ ಪ್ರಗತಿಯ ಬಗ್ಗೆ

೨೦. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ತುಂಗಭದ್ರಾ ನದಿಯ ಮೂಲದ ಗದಗ ಬೆಟಗೇರಿ ನೀರು ಸರಬರಾಜು ಯೋಜನೆಯಲ್ಲಿ ಆಗಿರುವ ಕಾರ್ಯ ಪ್ರಗತಿಯೇನು ?

(ಆ) ಕೊಳವೆಗಳನ್ನು ಸರಬರಾಜು ಮಾಡಲು ಗುತ್ತಿಗೆದಾರರನ್ನು ಈಗಾಗಲೇ ನೇಮಕ ಮಾಡಿರುವುದು ನಿಜವೇ ?

(ಇ) ಗುತ್ತಿಗೆದಾರರ ಹೆಸರು ಮತ್ತು ಈವರೆವಿಗೂ ಅವರಿಂದ ಆಗಿರುವ ಕೊಳವೆಗಳ ಸರಬರಾಜಿನ ಪ್ರಮಾಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ನಗರಾಭಿವೃದ್ಧಿ ಸಚಿವರು).—

ಈ ಯೋಜನೆಯಲ್ಲಿ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿವೆ :

(ಅ) ಕೋರಲಹಳ್ಳಿ ಬಳಿಯ ಜಾಕ್‌ವೆಲ್ ಮೇಲೆ ಪಂಪ್‌ಹೌಸ್ ಸ್ವಿಚ್‌ಗೇರ್ ಕೊಠಡಿ ನಿರ್ಮಾಣ ಕಾರ್ಯ.

(ಆ) ಕೋರಲಹಳ್ಳಿ ಮೂಲಸ್ಥಾವರದ ಬಳಿ ನೌಕರರ ವಸತಿ ಗೃಹಗಳು.

(ಇ) ಮುಂಡರಗಿಯಲ್ಲಿ ಉಪ-ವಿಭಾಗದ ಕಛೇರಿ ಆಗ್ರಾಣ ಮತ್ತು ವಸತಿ ಗೃಹಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿದೆ.

(ಈ) ಇದೇ ಸ್ಥಳದಲ್ಲಿ ೩.೫ ದಶಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಶುದ್ಧೀಕರಣ ಘಟಕ.

(ಉ) ಸಿಂಗಟರಾಯನ ಕೆರೆಯಿಂದ ಗದಗದವರೆಗೆ೮೦೦ ಮಿ.ಮೀ. ವ್ಯಾಸದ ಕಾಂಕ್ರೀಟ್ ಕೊಳವೆ ಮಾರ್ಗ.

(ಊ) ಸಿಂಗಟರಾಯನ ಕೆರೆಯಲ್ಲಿ ೨೧ ದಶಲಕ್ಷ ಗ್ಯಾಲನ್ ಸಾಮರ್ಥ್ಯದ ಭೂಮಟ್ಟದ ಜಲ ಸಂಗ್ರಹಾಗಾರ.

(ಋ) ಇದೇ ಸ್ಥಳದಲ್ಲಿ ನೌಕರರ ವಸತಿ ಗೃಹಗಳು.

ಆ) ಮತ್ತು ಇ) ೯.೫೩ ಕಿ. ಮೀ. ಉದ್ದದವರೆವಿಗೂ ಅಂದರೆ ಸಿಂಗಟರಾಯನ ಕೆರೆಯ ಜಲಸಂಗ್ರಹಾಗಾರದಿಂದ ಗದಗ್‌ದವರೆಗೆ ೮೦೦ ಮಿ.ಮೀ. ವ್ಯಾಸದ ಕಾಂಕ್ರೀಟ್ ಕೊಳವೆ ಮಾರ್ಗವನ್ನು ಅಳವಡಿಸುವ ಕೆಲಸವನ್ನು ಇಂಡಿಯನ್ ಹ್ಯೂಮ್ಸ್ ಪೈಪ್ಸ್ ಕಂಪನಿ, ಬೆಂಗಳೂರು ಇವರಿಗೆ ಗುತ್ತಿಗೆಗೆಕೊಡಲಾಗಿದೆ. ಇವರು ಬೆಂಗಳೂರಿನ ಕಾರ್ಖಾನೆಯಲ್ಲಿ ೭೭೦ ಮೀಟರ್ ಉದ್ದದ ಕೊಳವೆಯನ್ನು ತಯಾರಿಸಿದ್ದು ೪೫ ಮೀಟರ್ ಉದ್ದದ ಕೊಳವೆಯನ್ನು ಕೆಲಸದ ಸ್ಥಳಕ್ಕೆ ಸಾಗಿಸಿದ್ದಾರೆ.

ಯಾದಗಿರಿ ತಾಲ್ಲೂಕಿನಲ್ಲಿ ಉಚಿತ ನಿವೇಶನ ಹಂಚಿಕೆ ವಿಚಾರ ಕುರಿತು.

೨೬. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಯಾದಗಿರಿ ತಾಲ್ಲೂಕಿನಲ್ಲಿ ೧೯೮೪-೮೫, ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಜನತಾ ವಸತಿ ಯೋಜನೆಯಡಿಯಲ್ಲಿ ಹಂಚಲಾದ ಮನೆ ನಿವೇಶನಗಳ ಸಂಖ್ಯೆ ಎಷ್ಟು ?

(ಆ) ಸದರಿ ಯೋಜನೆಯಡಿ ಗುರ್ತಿಸಲಾದ ಕುಟುಂಬಗಳ ಸಂಖ್ಯೆ ಎಷ್ಟು ?

(ಇ) ಎಲ್ಲಾ ಫಲಾನುಭವಿಗಳಿಗೂ ಸರ್ಕಾರವು ಯಾವಾಗ ನಿವೇಶನ ದೊರಕಿಸಲಾಗುವುದು.